**ದಿಃ02.07.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀಸವಾಲು : 5ನೇ ಪ್ರತಿವಾದಿ ಪರ ಶ್ರೀ ಎಂ ಡಿ ಎಂ ವಕೀಲರಿಂದ

5 ನೇ ಮತ್ತು 6ನೇ ಪ್ರತಿವಾದಿಯವರನ್ನು ಈ ಕೇಸಿನಲ್ಲಿ ಯಾಕೆ ಪಾರ್ಟಿಯಾಗಿ ಮಾಡಲಾಗಿದೆ ಎಂದು ವೈಯಕ್ತಿಕವಾಗಿ ನನಗೆ ಗೊತ್ತಿಲ್ಲ. 5ನೇ ಪ್ರತಿವಾದಿ ಸೆವೆರಿನ್ ಡಿಸೋಜಾರವರು 3ನೇ ಪ್ರತಿವಾದಿ ನಾಗೇಶ ಬಾಳಿಗಾರವರಲ್ಲಿ ಬಿ ಶೆಡ್ಯೂಲ್ ಆಸ್ತಿಯನ್ನು ಖರೀದಿಸಿದ ವಿಚಾರ ನನಗೆ ಗೊತ್ತಿಲ್ಲ. 5ನೇ ಪ್ರತಿವಾದಿಯವರು 3ನೇ ಪ್ರತಿವಾದಿಗೆ ಬಿ ಶೆಡ್ಯೂಲ್ ಆಸ್ತಿಯನ್ನು ಮಾರಾಟ ಮಾಡಲು ಸಂಪೂರ್ಣ ಹಕ್ಕು ಇತ್ತು ಎಂದರೆ ನನಗೆ ಗೊತ್ತಿಲ್ಲ. 3ನೇ ಪ್ರತಿವಾದಿಯಿಂದ 5ನೇ ಪ್ರತಿವಾದಿ ಬಿ ಶೆಡ್ಯೂಲ್ ಆಸ್ತಿ ಸೇಲ್ ಡೀಡ್ ದಿನಾಂಕ 17.09.2009ರಂತೆ ಖರೀದಿ ಮಾಡಿದರಿಂದ ಸಂಪೂರ್ಣ ಹಕ್ಕು 5ನೇ ಪ್ರತಿವಾದಿಗೆ ಬಂದಿದೆ ಎಂದರೆ ನಾನು ಒಪ್ಪುವುದಿಲ್ಲ. ಬಿ ಶೆಡ್ಯೂಲ್ ಸ್ವತ್ತಿನ ಆರ್ ಟಿ ಸಿ 5ನೇ ಪ್ರತಿವಾದಿಯ ಹೆಸರಿಗೆ ಇದೆ ಎಂದರೆ ನಾನು ಗಮನಿಸಿಲ್ಲ.

2. ದಾವೆಯನ್ನು ಸಲ್ಲಿಸುವಾಗ ಬಿ ಶೆಡ್ಯೂಲ್ ನಲ್ಲಿರುವ ಮನೆ ಎ ಶೆಡ್ಯೂಲ್ ನಲ್ಲಿ ಇದೆ ಎಂದು ತೋರಿಸಲು ಸ್ಕೆಚನ್ನು ನನ್ನ ಪ್ಲೈಂಟ್ ಸಲ್ಲಿಸುವಾಗ ಹಾಕಿಲ್ಲ. ಬಿ ಶೆಡ್ಯೂಲ್ ಆಸ್ತಿಯಿಂದ ಎ ಶೆಡ್ಯೂಲ್ ಆಸ್ತಿಗೆ ಹೋಗಲು ಕಾಲು ದಾರಿ ಇದೆ ಎಂದು ತೋರಿಸಲು ಸ್ಕೆಚನ್ನು ಹಾಕಿಲ್ಲ. ಆಸ್ತಿಯನ್ನು ಖರೀದಿ ಮಾಡುವಾಗ ಆ ಜಾಗದಲ್ಲಿ ಕಾಲು ದಾರಿ ಇತ್ತು ಎಂದು ಖರೀದಿ ಪತ್ರದಲ್ಲಿ ನಮೂದು ಇಲ್ಲ. ದಾವಾ ಪತ್ರದಲ್ಲಿ ಹೇಳಿರುವ ಎ ಶೆಡ್ಯೂಲ್ ಆಸ್ತಿಯಲ್ಲಿ ಮನೆ ಇದೆ, ಮತ್ತು ಕಾಲು ದಾರಿ ಇದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ಒ ಎಸ್ ನಂ 271/1997ರ ದಾವೆಯ ಬಗ್ಗೆ ತಿಳುವಳಿಕೆ ಇದೆ. ಆ ದಾವೆಯಲ್ಲಿ ನನ್ನ ಪರವಾಗಿ ಯಶವಂತ ಮರೋಳಿ ಹಾಜರಿದ್ದರು ಎಂದರೆ ಸರಿ. ಎಫ್ ಡಿ ಪಿ 6/2001 ಕೇಸಿನಲ್ಲಿ ಸಹ ನನ್ನ ಪರವಾಗಿ ಯಶವಂತ ಮರೋಳಿ ಹಾಜರಿದ್ದರು ಎಂದರೆ ಇರಬಹುದು. ಸದರಿ ಎರಡೂ ಪ್ರಕರಣಗಳಲ್ಲಿ ನಾನು ನನ್ನ ತಕರಾರು ಸಲ್ಲಿಸಿದ್ದೀರಾ ಎಂದರೆ ನನಗೆ ನೆನಪಿಲ್ಲ. ಅದು ವಕೀಲರಿಗೆ ಗೊತ್ತು.

4. ಬಿ ಶೆಡ್ಯೂಲ್ ಆಸ್ತಿಯನ್ನು ನ್ಯಾಯಾಲಯದ ಆದೇಶದಂತೆ ಡೆಲಿವರಿ ವಾರೆಂಟ್ ಪಡೆದು ನನ್ನನ್ನು ಅಲ್ಲಿಂದ ತೆರವುಗೊಳಿಸಿದರು ಎಂದರೆ ಸರಿ. ಆ ಸಮಯದಲ್ಲಿ

ತೆರವುಗೊಳಿಸಿದ ಬಗ್ಗೆ ನಾನು ನ್ಯಾಯಾಲಯಕ್ಕೆ ಬಂದು ತಕರಾರು ಅಥವಾ ಅರ್ಜಿ ಸಲ್ಲಿಸಿದ್ದೇನೋ ಇಲ್ಲವೋ ಗೊತ್ತಿಲ್ಲ. ಎಕ್ಸಿಕ್ಯೂಶನ್ ಪಿಟಿಷನ್ 50/2007ರಲ್ಲಿ ತಕರಾರು ಅರ್ಜಿ ಸಲ್ಲಿಸಿದ್ದೇನೋ ಇಲ್ಲವೋ ನನಗೆ ನೆನಪಿಲ್ಲ. ಒ ಎಸ್ ನಂ 271/1997, ಎಫ್ ಡಿ ಪಿ 6/2001, ಎಕ್ಸಿಕ್ಯೂಶನ್ ಸಂಖ್ಯೆ: 50/2007 ರಲ್ಲಿ ನ್ಯಾಯಾಲಯದಲ್ಲಿ ಆದ ಆದೇಶದಂತೆ ಸ್ವತ್ತನ್ನು ಜಪ್ತು ಮಾಡಲಾಗಿದೆ ಎಂದರೆ ನನಗೆ ನೆನಪಿಲ್ಲ.

5. ಎಕ್ಸಿಕ್ಯೂಶನ್ ಪಿಟಿಷನ್ 50/2007ರಲ್ಲಿ 2ನೇ ಪ್ರತಿವಾದಿ ನರೇಶ್ ಬಾಳಿಗಾ ಪರವಾಗಿ ಸೇಲ್ ಸರ್ಟಿಫಿಕೇಟ್ ಇಶ್ಯೂ ಮಾಡಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. 5ನೇ ಪ್ರತಿವಾದಿ ಬಿ ಶೆಡ್ಯೂಲ್ ಆಸ್ತಿಯನ್ನು ಖರೀದಿಸುವಾಗ ನ್ಯಾಯಯುತವಾಗಿ ಬೆಲೆ ಕೊಟ್ಟು 3ನೇ ಪ್ರತಿವಾದಿಯಿಂದ ಖರೀದಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ನನ್ನ ವಾದ ಪತ್ರದಲ್ಲಿ ಹೇಳಿದಂತೆ ಒ ಎಸ್ ನಂ 271/1997, ಎಫ್ ಡಿ ಪಿ 6/2001, ಎಕ್ಸಿಕ್ಯೂಶನ್ ಸಂಖ್ಯೆ: 50/2007 ಮೂರೂ ಪ್ರಕರಣದಲ್ಲಿ ಯಾವುದೇ ಫ್ರಾಡ್ ಆಗಲೀ ಶಡ್ಯಂತ್ರವಾಗಲೀ ಆಗಿಲ್ಲ ಎಂದರೆ ನನಗೆ ಗೊತ್ತಿಲ್ಲ.

6. ಬಿ ಶೆಡ್ಯೂಲ್ ಸ್ವತ್ತು ತೋಡಿಗೆ ತಾಗಿಕೊಂಡಿದೆ ಎಂದರೆ ಸರಿಯಲ್ಲ. 5ನೇ ಪ್ರತಿವಾದಿ ಸದರಿ ಜಾಗ ಖರೀದಿ ಮಾಡಿದ ನಂತರ ನಿರಂತರವಾಗಿ ಮುನ್ಸಿಪಾಲಿಟಿಗೆ ಟ್ಯಾಕ್ಸ್ ಕಟ್ಟುತ್ತಾ ಬಂದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅದಕ್ಕಾಗಿ ನಾವು ತಕರಾರು ಮಾಡಿರುತ್ತೇವೆ ಎನ್ನುತ್ತಾರೆ. ತಕರಾರು ಮಾಡಿದ ಬಗ್ಗೆ ದಾಖಲೆ ನ್ಯಾಯಾಲಯಕ್ಕೆ ಹಾಜರುಪಡಿಸಬಹುದು. ಬಿ ಶೆಡ್ಯೂಲ್ ಆಸ್ತಿಗೆ ತಾಗಿಕೊಂಡಿರುವುದು ಸರಕಾರಿ ಆಸ್ತಿ ಎಂದರೆ ಸರಿಯಲ್ಲ. ಬಿ ಶೆಡ್ಯೂಲ್ ಆಸ್ತಿಯೊಂದಿಗೆ ಅದಕ್ಕೆ ತಾಗಿಕೊಂಡಿರುವ ಸರಕಾರಕ್ಕೆ ಸೇರಿದ ಆಸ್ತಿಯೂ ಕೂಡಾ 5ನೇ ಪ್ರತಿವಾದಿಯ ಸ್ವಾದೀನದಲ್ಲಿದೆ ಎಂದರೆ ಸರಿಯಲ್ಲ. ಬಿ ಶೆಡ್ಯೂಲ್ ಆಸ್ತಿಯನ್ನು 5ನೇ ಪ್ರತಿವಾದಿ ಖರೀದಿ ಮಾಡುವ ಸಮಯ ನಾನು ತಕರಾರು ಮಾಡಿಲ್ಲ. ನನಗೆ ಈ 1 ರಿಂದ 4ನೇ ಪ್ರತಿವಾದಿಗಳು ಮೋಸ ಮಾಡಿದ್ದಾರೆ ಎಂದು ಪೊಲೀಸ್ ಠಾಣೆಯಲ್ಲಾಗಲೀ ನ್ಯಾಯಾಲಯದಲ್ಲಾಗಲೀ ದೂರು ಸಲ್ಲಿಸಿಲ್ಲ. ಬಿ ಶೆಡೂಲ್ ಆಸ್ತಿಯಿಂದ ಕಾನೂನುಬಾಹಿರವಾಗಿ ಹೊರಗೆ ಹಾಕಿದ್ದಾರೆ ಎಂದು ಪೊಲೀಸ್ ಠಾಣೆಯಲ್ಲಾಗಲೀ ನ್ಯಾಯಾಲಯದಲ್ಲಾಗಲೀ ದೂರು ಸಲ್ಲಿಸಿದ್ದೀರಾ ಎಂದರೆ ದೂರನ್ನು ಕೊಟ್ಟಿಲ್ಲ, ಆದರೆ 2011ರಲ್ಲಿ ದಾವೆ ಸಲ್ಲಿಸಿದ್ದೆ. 1 ರಿಂದ 4ನೇ ಪ್ರತಿವಾದಿಗಳು ಬಿ ಶೆಡ್ಯೂಲ್ ಆಸ್ತಿಯನ್ನು ಮೋಸ ಮಾಡಿ ನನ್ನಿಂದ ಪಡೆದುಕೊಂಡಿದ್ದಾರೆ ಎಂಬ ಬಗ್ಗೆ ಪತ್ರಿಕಾ ಪ್ರಕಟಣೆ ಹೊರಡಿಸಿಲ್ಲ, ಆದರೆ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿದ್ದೆ.

7. 5ನೇ ಪ್ರತಿವಾದಿ ವಿರುದ್ಧ ದುರುದ್ದೇಶದಿಂದ ಈ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಬಿ ಶೆಡ್ಯೂಲ್ ಹಾಗೂ ಎ ಶೆಡ್ಯೂಲ್ ಆಸ್ತಿಯಲ್ಲಾಗಲೀ ಹಕ್ಕಿಲ್ಲ ಎಂದರೆ ಸರಿಯಲ್ಲ, ಹಕ್ಕು ಬೇಕು ಎಂದು ನ್ಯಾಯಾಲಯಕ್ಕೆ ಬಂದಿದ್ದೇನೆ ಎನ್ನುತ್ತಾರೆ.

ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಿ ಮುಂದೂಡಲಾಯಿತು.

**ನನ್ನ ಉಕ್ತಲೇಖನ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೇ ಕೇ ಸ ಇದೆ.**

**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,**
**ಬಂಟ್ವಾಳ.**